# ನನ್ನ ಹೆಂಡತಿ ನನ್ನ ಶಕ್ತಿ

**ಶ್ರೀಕಾಂತ್ ಸೀತಾರಾಮ್**
ಕಲರ್ಸ್ ಕನ್ನಡದ 'ಗಿಚ್ಚಿ ಗಿಲಿ ಗಿಲಿ' ಸ್ಪರ್ಧಿ



◆ **ನಿಮ್ಮ ಪರಿಚಯವನ್ನು ಹೇಳಿ...**

ಮೂಲತಃ ಬೆಂಗಳೂರಿಗ. ನನ್ನ ಕಲೆಯ ಆಸಕ್ತಿಗೆ ತಂದೆ ಕಾರಣ. ಶಾಲಾ ದಿನಗಳಿಂದಲೂ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಹೆಚ್ಚು ತೊಡಗಿಕೊಂಡಿದ್ದೆ. ನನ್ನ ಓದು ಮುಗಿಯುವ ತನಕ ಸಾಂಸ್ಕೃತಿಕ ತಂಡದ ನೇತೃತ್ವವನ್ನು ನಾನೇ ವಹಿಸುತ್ತಿದ್ದೆ. ಪದವಿಯ ನಂತರ ಶಾಲೆಯನ್ನು ಆರಂಭಿಸಿದೆ. ಯೋಗ–ರೇಖಿಯನ್ನು ಅಧ್ಯಯನ ಮಾಡಿದ್ದೇನೆ. ಅದರ ಜೊತೆ ಸಂಗೀತವನ್ನೂ ಅಭ್ಯಾಸ ಮಾಡಿದ್ದೇನೆ. ಅಪ್ಪ ನನ್ನನ್ನು ಶ್ರೀರಾಮನವಮಿ ಸಂಗೀತ ಕಾರ್ಯಕ್ರಮ ಸೇರಿದಂತೆ ಅನೇಕ ಪ್ರದರ್ಶನಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ರಂಗಭೂಮಿ ಕೂಡ ನನಗೆ ಪರಿಚಯ ಆಯಿತು. ನನ್ನ ತಾಯಿ ಕೂಡ ಸಂಗೀತ ಪ್ರೇಮಿ. ಸ್ವತಃ ನಾನೂ ವಯಲಿನ್, ಗಾಯನ ಕಲಿತಿದ್ದೇನೆ. ಇದೇ ಕಾರಣಕ್ಕೆ ಶಾಲೆ–ಕಾಲೇಜಿನಲ್ಲಿ ಪ್ರಾಮುಖ್ಯ ಸಿಗ್ತಾ ಇತ್ತು. ಆ ಅವಕಾಶವನ್ನು ಸದುಪಯೋಗ ಮಾಡಿಕೊಂಡಿದ್ದೇನೆ. 1994ರ ಆಸುಪಾಸು ದೊಡ್ಡ ಕಾರ್ಯಕ್ರಮಗಳನ್ನು ಸಂಘಟಿಸಿದ್ದೆ.

◆ **ನಿಮ್ಮ ಕಾಲೇಜು ದಿನಗಳು ಹೇಗಿದ್ದವು?**

ಮಲ್ಲೇಶ್ವರಂ ಎಂಇಎಸ್ ಕಾಲೇಜಿನಲ್ಲಿ ಓದಿದ್ದು. ಆಗಿನ ಶಿಕ್ಷಣ ಪದ್ಧತಿಗೂ ಇಂದಿನ ಕಾಲೇಜು ವಾತಾವರಣಕ್ಕೂ ತುಂಬ ವ್ಯತ್ಯಾಸ ಇದೆ. ಅಖಿಲ ಭಾರತ ಮಟ್ಟದ ರಂಗ ಸ್ಪರ್ಧೆಯಲ್ಲಿ ನಮ್ಮ ಕಾಲೇಜು ತಂಡ ಗೆದ್ದಿತ್ತು. ಆ ಸಮಯದಲ್ಲಿ ಟಿ.ಎನ್. ಶೇಷನ್, ಭಾರತ ಚುನಾವಣೆ ಆಯೋಗದ ಮುಖ್ಯಸ್ಥರಾಗಿದ್ದರು. ಅವರನ್ನು ನಮ್ಮ ಕಾಲೇಜಿಗೆ ಕರೆಸಿದ್ದೆವು. ಅಂತರರಾಷ್ಟ್ರೀಯ ಸಾಂಸ್ಕೃತಿಕ ಸ್ಪರ್ಧೆಯನ್ನೂ ಏರ್ಪಡಿಸಿದ್ದೆವು. ಅದಕ್ಕೆ ಹಿಲರಿ ಕ್ಲಿಂಟನ್ ಅವರನ್ನೂ ಕರೆಸುವ ವ್ಯವಸ್ಥೆ ಮಾಡಿದ್ದೆವು. ಕಾರಣಾಂತರದಿಂದ ಅವರು ಬರಲಿಲ್ಲ. ಅವರ ಕಾರ್ಯದರ್ಶಿ ಬರೆದ ಪತ್ರ ಈಗಲೂ ನನ್ನ ಬಳಿ ಇದೆ. ಜಾಕೀರ್ ಹುಸೇನ್, ಹರಿಪ್ರಸಾದ್ ಚೌರಾಸಿಯಾ ಅವರ ಕಾರ್ಯಕ್ರಮಗಳನ್ನು ನಮ್ಮ ಕಾಲೇಜಿನಿಂದ ಆಯೋಜಿಸಿದ್ದು ದೊಡ್ಡ ಸಂಗತಿ. ವಿದ್ಯಾರ್ಥಿಗಳಾದ ನಾವೇ ಜಾಹೀರಾತು ಮೂಲಕ ನಿಧಿ ಸಂಗ್ರಹಿಸಿ ಕಾರ್ಯಕ್ರಮ ಮಾಡಿದ್ದೆವು.

◆ **ರಂಗಭೂಮಿಯ ನಂಟು ಏಕೆ ಬೆಸೆದುಕೊಳ್ಳಲಿಲ್ಲ?**

ನನಗೆ ನಟನೆ ಬಗ್ಗೆ ಹೆಚ್ಚಿನ ಆಸಕ್ತಿ ಇರಲಿಲ್ಲ. ಕಾರ್ಯಕ್ರಮಗಳನ್ನು ಸಂಘಟಿಸುವ ಕಾಯಕದಲ್ಲಿ ತೊಡಗಿದ್ದೆ. ಆ ಅನುಭವದ ಹಿನ್ನೆಲೆಯಲ್ಲೇ 'ಶ್ರೀ ಅನುಭವ ಶಾಲೆ'ಯನ್ನು ಆರಂಭಿಸಿದ್ದೆ. ಬೇರೆ ಬೇರೆ ತೊಂದರೆಯ ಕಾರಣಕ್ಕೆ ಅದನ್ನು ಬಿಟ್ಟೆ. ಈಗ 'ಅಲೆ' ಎನ್ನುವ ಸಂಸ್ಥೆಯನ್ನು ಆರಂಭಿಸಿದ್ದೇನೆ. ಅದನ್ನು 'ಸ್ಕೂಲ್ ಆಫ್ ಆಲ್ ಆರ್ಟ್ಸ್' ಪರಿಕಲ್ಪನೆಯಲ್ಲಿ ರೂಪಿಸುತ್ತಿದ್ದೇವೆ. ಒಂದೇ ನೆಲೆಯಲ್ಲಿ ಹಲವು ಕಲೆ ಕಲಿಸುವ ಉದ್ದೇಶ ಇದೆ. ಮುಂದೆ ವಿವಿಧ ಸಂಸ್ಕೃತಿ ಹಬ್ಬಗಳು, ತ್ಯಾಗರಾಜ್ ಆರಾಧನೆ ಕಾರ್ಯಕ್ರಮ ಆಯೋಜಿಸುವ ಉದ್ದೇಶ ಇದೆ. ಅಲ್ಲಿ ಸಂಗೀತದ ಜೊತೆ ರಂಗ ಚಟುವಟಿಕೆಯೂ ಇದ್ದೇ ಇರುತ್ತದೆ. ಕಲಾ ಪ್ರೇಮದಿಂದಲೇ ಹರಿಣಿಯನ್ನು ಮದುವೆಯಾದೆ. ಅದು ನನಗೆ ಇನ್ನೂ ಬಲವನ್ನು ಕೊಟ್ಟಿದೆ. ಹೊಸ ಹೊಸ ಸವಾಲು ಮತ್ತು ಪ್ರಯೋಗವನ್ನು ಮಾಡುತ್ತಿದ್ದೇನೆ. ಹರಿಣಿ ಮನೆಯಲ್ಲಿ ಎಲ್ಲರೂ ಸಂಗೀತಗಾರರು. ತ್ಯಾಗರಾಜರ ಆರಾಧನೆಗೆ ಹೋದಾಗ ಅವರ ತಾಯಿ ಪರಿಚಯ ಆದರು. ಅಲ್ಲೇ ಪ್ರಪೋಸ್ ಮಾಡಿದ್ದೆ. ನಮ್ಮ ಮಾವ ಬಿ.ಕೆ. ಚಂದ್ರಮೌಳಿ ದೊಡ್ಡ ವಿದ್ವಾಂಸರಾಗಿದ್ದರು.

◆ **ನಿಮ್ಮ ಮನಸ್ಥಿತಿಗೆ ಟೀವಿ ಶೋ ಹೇಗೆ ಹೊಂದಿಕೆ ಆಯ್ತು?**

'ರಾಜಾ ರಾಣಿ' ಮೂಲಕ ಟೀವಿ ಪ್ರವೇಶ ಮಾಡಿದೆ. ಅದೂ ಹರಿಣಿ ಗಂಡ ಅಂತ ಹೋಗಿದ್ದೆ. ಇಲ್ಲೂ ಹಾಗೆ ಆಗಿದೆ, ಆಕೆ ನೈಜ ಕಲಾವಿದೆ. ಅವಳನ್ನು ಪ್ರೋತ್ಸಾಹಿಸುವುದೇ ನನಗೆ ಮುಖ್ಯ. ನಾನು ನಿರಂತರವಾಗಿ ಗಂಟೆಗಟ್ಟಲೇ ಏನಾದರೂ ಕ್ರಿಯೆಯನ್ನು ಮಾಡಬಲ್ಲೆ. ಒಂದು ಸ್ಕ್ರಿಪ್ಟ್ ಕೊಟ್ಟು ಕ್ಯಾಮೆರಾ ಮುಂದೆ ನಟಿಸಿ ಡೈಲಾಗ್ ಹೇಳು ಅಂದರೆ ಕಷ್ಟ. ಅಲ್ಲಿ ಏನೋ ಎಡವಟ್ಟು ಆಗುತ್ತದೆ. ಪಂಚಿಂಗ್ ಟೈಮಿಗೆ ಡೈಲಾಗ್ ನೆನಪಾಗಲ್ಲ. ಅದು ಇಲ್ಲಿ ನಡೆಯಲ್ಲ ಎಂದೇ ಬಿಟ್ಟಿದ್ದೇನೆ. ನಾಟಕೀಯವಾಗಿ ನನಗೆ ಮಾಡಲು ಬರುವುದಿಲ್ಲ. ಏನೇ ಇದ್ದರೂ ನೈಜವಾಗಿ ತೋರಿಸಬಲ್ಲೆ. ಆ ಕ್ಷಣ ನನಗೆ ಏನೂ ಅನಿಸುತ್ತೋ ಅದನ್ನು ಮಾಡುತ್ತೇನೆ. ಮುಂದೆ ಏನಾಗುತ್ತೋ ಗೊತ್ತಿಲ್ಲ. ಟೀವಿಯಿಂದ ಸ್ನೇಹ ಬಳಗ ದೊಡ್ಡದಾಗಿದೆ. ಅವರಿಂದ ತುಂಬ ಕಲಿತಿದ್ದೇನೆ.

◆ **'ಗಿಚ್ಚಿ ಗಿಲಿ ಗಿಲಿ'ಗೆ ಬಂದಿದ್ದು ಹೇಗೆ?**

ಹಳೆಯ ಶೋ ಶ್ರಮವೇ ಇವತ್ತಿನ 'ಗಿಚ್ಚಿ ಗಿಲಿ ಗಿಲಿ' ವೇದಿಕೆಗೆ ಕರೆತಂದಿದೆ. ಚಾಂಪಿಯನ್ ಆಗಬೇಕು ಅಂತ ಇಲ್ಲ. ನೀರಿಗೆ ಬಿದ್ದ ಮೇಲೆ ಈಜಲೇಬೇಕು ಈಜುತ್ತಿದ್ದೇನೆ. 'ರಾಜ ರಾಣಿ' ಅಷ್ಟೇನಾ ಮುಂದೆ ಏನೂ ಮಾಡಲ್ವಾ ಅಂತಿದ್ರು. ನಿಜಕ್ಕೂ ಅದು ನನಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿದೆ. ನಾಡಿನ ಉದ್ದಗಲಕ್ಕೂ ನನ್ನ ಹೆಸರನ್ನು ಪರಿಚಯಿಸಿದೆ. ಹಾಗಾಗಿ ಈ ಅವಕಾಶ ಬಂದ ತಕ್ಷಣ ಒಪ್ಪಿದೆ. ಇರುವುದು ಒಂದೇ ಜನ್ಮ, ಇರುವ ತನಕ ಎಲ್ಲ ಪ್ರಯತ್ನವನ್ನು ಮಾಡಬೇಕು. ಕೆಲವೊಮ್ಮೆ ಇದಕ್ಕೇ ನಾನು ಅರ್ಹ ಅಲ್ಲ. ನನ್ನ ಬದಲಿಗೆ ಇಂಥವರನ್ನು ಹಾಕಿ ಎಂದೂ ಹೇಳಿದ್ದಿದೆ. ಆದರೆ ನಾನೇ ಬೇಕು ಎಂದು ಹಾಕಿಕೊಂಡಿದ್ದೂ ಇದೆ. ಹಾಗಾಗಿ ನನಗೆ ಮಿತಿ ಇದೆ. ನನ್ನ ಮಿತಿ ಚೌಕಟ್ಟಿನಲ್ಲಿ ಅವರು ಕೆಲಸ ಮಾಡಬೇಕಾಗುತ್ತದೆ. ನಟನೆ ಬರುತ್ತೋ ಇಲ್ಲವೋ ಗೊತ್ತಿಲ್ಲ. ಅವರು ಹೇಳಿದ್ದನ್ನು ಶ್ರಮಪಟ್ಟಾದರೂ ಮಾಡುತ್ತೇನೆ.

■ **ರಾಘವೇಂದ್ರ ಕೆ.**